
Sri Sri Ramanuja Charya


|| श्री ||
|| श्रीमते रामानुजाय नमः ||
ಶ್ರೀ ಯದುಗಿರಿ ಯತಿರಾಜ ಮಠ
SRI YADUGIRI YATHIRAJA MUTT


H.H. Sri Sri Yadugiri Yathiraja Narayana Ramanuja Jeeyar Swami


# ಮಂಗಳಾಶಾಸನ

ಸುಮಾರು 1600 ವರ್ಷಗಳಷ್ಟು ಪುರಾತನವಾದ ಸಂಪಿಗೆಯ ಶ್ರೀ ಶ್ರೀನಿವಾಸಸ್ವಾಮಿಯ ದೇವಾಲಯವು ತುಮಕೂರು ಜಿಲ್ಲೆಯ ಸಂಪಿಗೆಯ ಗ್ರಾಮದಲ್ಲಿದೆ. ಐತಿಹಾಸಿಕ ಮಹತ್ವವನ್ನು ಹೊಂದಿರುವ ಈ ಪ್ರಾಚೀನ ಕ್ಷೇತ್ರದಲ್ಲಿ ಶ್ರೀ ಶ್ರೀನಿವಾಸರು ಹಾಗೂ ಪದ್ಮಾವತಿ ಅಮ್ಮನವರು ದಿವ್ಯಸಂಕಲ್ಪವನ್ನು ಮಾಡಿ ಇಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.

ಕರ್ನಾಟಕದಾದ್ಯಂತ ಈ ದೇವಾಲಯಕ್ಕೆ ಸಹಸ್ರಾರು ಭಕ್ತರಿದ್ದಾರೆ. ಕನ್ನಡ ಭಾಷೆಯಲ್ಲಿ ಇಲ್ಲಿನ ಸ್ಥಳ ಪುರಾಣದ ಪುಸ್ತಕವು ಬಹಳ ಹಿಂದೆಯೇ ಪ್ರಕಟವಾಗಿತ್ತು. ಆ ಪುಸ್ತಕವು ಈಗ ಲಭ್ಯವಿಲ್ಲದ ಕಾರಣ ಅದನ್ನು ಪುನರ್ಮುದ್ರಣ ಮಾಡಿ ಭಕ್ತರಿಗೆ ತಲುಪಿಸುವ ಪ್ರಯತ್ನವನ್ನು ಶ್ರೀ ಸಂಪಿಗೆ ಶ್ರೀವತ್ಸ ಸೇವಾ ಟ್ರಸ್ಟ್‌ನವರು ಮಾಡುತ್ತಿರುವುದು ನಮಗೆ ಬಹಳ ಸಂತಸ ನೀಡಿದೆ.

ಈ ದೇವಾಲಯದ ಅಭಿವೃದ್ಧಿ ಹಾಗು ಶ್ರೇಯಸ್ಸಿಗೆ ನಮ್ಮ ಶ್ರೀಮಠದ ಆರಾಧ್ಯ ದೈವ ಶ್ರೀಲಕ್ಷ್ಮೀನರಸಿಂಹ ಹಾಗೂ ಆಚಾರ್ಯ ರಾಮಾನುಜರಲ್ಲಿ ಪ್ರಾರ್ಥಿಸುತ್ತೇವೆ.

ಬೆಂಗಳೂರು

15–12–2023

ಶ್ರೀರಾಮಾನುಜ ಪಾದುಕಾ ಸೇವಕ

ಶ್ರೀಯತಿರಾಜಃ

ಶ್ರೀ ಯತಿರಾಜಃ


(Moola Stanam : Tirunarayanapuram, Melukote - 571 431)
No. 198, Sampige Road, 11th Cross, Malleshwaram, Bengaluru - 560 003.
Ph : 080 2334 5260 | Mob : 94480 63158 | Email : syym.blr@gmail.com | Web : www.yymutt.in

# ಮುನ್ನುಡಿ

"ಸಂಪಿಗೆಯ ಮಹತ್ವ" ಎಂಬುದು ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸಂಪಿಗೆ ಗ್ರಾಮದ ಇತಿಹಾಸವನ್ನು ತಿಳಿಸುವ ಒಂದು ಸಣ್ಣ ಪುಸ್ತಕ. ಮೈಸೂರು ಗೆಜೆಟ್ಟಿಯರ್ ಮತ್ತು ಲೇಖಕರಾದ ಶ್ರೀ ಬಿ. ಲೂಯಿಸ್ ರೈಸ್ ಸಂಪಿಗೆ ಗ್ರಾಮದ ಬಗ್ಗೆ ಹೀಗೆ ಹೇಳುತ್ತಾರೆ.

"ಜಿಲ್ಲೆಯಲ್ಲಿ ಅತ್ಯಂತ ಪ್ರಾಚೀನವಾದ ಗ್ರಾಮ ಗುಬ್ಬಿ ತಾಲ್ಲೂಕಿನ ಸಂಪಿಗೆ. ಇದು ಚಂಪಕನಗರ ಅಥವಾ ಚಂಪಕಪುರಿ ಎಂಬ ಹೆಸರಿನಿಂದ ಹಿಂದೆ ಕರೆಯಲ್ಪಡುತ್ತಿದ್ದು, ಮಹಾರಾಜ ಹಂಸಧ್ವಜನ ಪುತ್ರನಾದ ರಾಜ ಸುಧನ್ವನ ರಾಜಧಾನಿಯಾಗಿತ್ತು".

ಸಂಪಿಗೆ ಶ್ರೀ ಶ್ರೀನಿವಾಸದೇವರ ದೇವಸ್ಥಾನದ ಐತಿಹ್ಯವನ್ನು ಭಾಸ್ಕರ ಎಂಬ ಗೌತಮ ಋಷಿಯ ವಂಶಸ್ಥರಾದ ಬ್ರಾಹ್ಮಣನೊಬ್ಬನ ಬರಹದಿಂದ ಉಲ್ಲೇಖಿತಗೊಂಡು ಮೇಲೆ ಹೇಳಿದ ಪುಸ್ತಕದಲ್ಲಿ ತಿಳಿಸಲಾಗಿದೆ. ಇಲ್ಲಿರುವ ಪುರಾತನ ದೇವಸ್ಥಾನದ ಶ್ರೀ ಶ್ರೀನಿವಾಸದೇವರ ವಿಗ್ರಹವು ದ್ವಾಪರಯುಗದಲ್ಲಿ ಸ್ಥಾಪಿತವಾಗಿದೆ. ಶಂಖ, ಚಕ್ರ, ಗಧಾಪಾಣಿಯಾದ ಮನೋಹರ ಮೂರ್ತಿಯು ಶರಣಾಗತಿ ಹಸ್ತ ಮುದ್ರೆಯನ್ನು ಹೊಂದಿದೆ.

ಸಂಪಿಗೆ ಶ್ರೀ ಶ್ರೀನಿವಾಸದೇವರ ಅನುಗ್ರಹ ಲೋಕದ ಎಲ್ಲಾ ಭಕ್ತರ ಮೇಲೆ ಸದಾ ಇರಲೆಂದು ಹಾರೈಸುತ್ತೇವೆ.

**– ಶ್ರೀ ಸಂಪಿಗೆ ಶ್ರೀವತ್ಸ ಸೇವಾ ಟ್ರಸ್ಟ್**

# ಸಂಪಿಗೆ ಮಹಾತ್ಮೆ

ಲಕ್ಷ್ಮಿಗೆ ನಿವಾಸಭೂತನೂ, ಪುರಾಣಪುರುಷರಲ್ಲಿ ಉತ್ತಮನೂ ಅದ ಮಾಧವನೇ ! ನಿನಗೆ ನಮಸ್ಕಾರವು. ನಿನ್ನ ಲೀಲೆಯನ್ನು ಸ್ಮರಿಸುತ್ತಿರುವ ನನಗೆ ಪ್ರಸನ್ನನಾಗು.

ಗೌತಮಋಷಿಯ ಕುಲದಲ್ಲಿ ಹುಟ್ಟಿದ ಭಾಸ್ಕರನೆಂಬ ಬ್ರಾಹ್ಮಣನು ವ್ಯಾಸ ಋಷಿಯ ದರ್ಶನವನ್ನು ಹೊಂದಲಿಚ್ಛೆಯುಳ್ಳವನಾಗಿ ಹಿಮವತ್ ಪರ್ವತವನ್ನು ಕುರಿತು ಹೊರಟು ಮಾರ್ಗದಲ್ಲಿ ಅನೇಕ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ತನ್ನ ಸಮಸ್ತ ಪಾಪವನ್ನು ಕಳೆದುಕೊಂಡವನಾಗಿ, ಹಿಮವತ್ ಪರ್ವತವನ್ನು ತಲುಪಿ ಅದರ ಅರೆದಪ್ಪಲಿನಲ್ಲಿ ಒಂದು ಕಡೆ ಸುಖವಾಗಿ ಕುಳಿತುಕೊಂಡು, ತಪೋನಿಧಿಯಾದ ಶ್ರೀಮದ್ವ್ಯಾಸ ಋಷಿಯು ಎಲ್ಲಿ, ಹೇಗೆ, ಎಂತಹವನಾಗಿದ್ದಾನು ?, ಅವನನ್ನು ನೋಡುವುದು ಹೇಗೆ?, ಅವನನ್ನು ಕಾಣುವ ಮಾರ್ಗವು ಯಾವುದಿದ್ದೀತು ? ಎಂಬ ದೊಡ್ಡ ಚಿಂತೆಯಿಂದ ಕೂಡಿದವನಾಗಿ, ಆ ಋಷಿಯನ್ನು ಧ್ಯಾನಿಸುತ್ತಿದ್ದ ಹಾಗೆಯೇ ಗಾಢನಿದ್ರೆಯನ್ನು ಹೊಂದಿ ಸ್ವಪ್ನದಲ್ಲಿ ಆ ಋಷಿಯನ್ನು ಕಂಡನು. ಅಯ್ಯಾ ಬ್ರಾಹ್ಮಣ ಶ್ರೇಷ್ಠನೇ ! ಕಲಿಯುಗದಲ್ಲಿ ಸಾಧಾರಣವಾಗಿ ಧರ್ಮ ಚಕ್ಷುಸ್ಸುಗಳಿಗೆ ನಾನು ಕಾಣಿಸಿಕೊಳ್ಳತಕ್ಕವನಲ್ಲ. ನೀನು ಮಾಡಿರುವ ತೀರ್ಥಸ್ನಾನ, ಪುಣ್ಯಕ್ಷೇತ್ರಗಳ ಸೇವೆ ಮತ್ತು ನನ್ನಲ್ಲಿ ನಿನ್ನ ಅತಿಶಯವಾದ ಭಕ್ತಿ ಇವುಗಳಿಂದ ನಾನು ಸಂತುಷ್ಟನಾಗಿ ನಿನಗೆ ಒಲಿದಿದ್ದೇನೆ. ನಾನೇ ವ್ಯಾಸ. ನೀನು ವರಕ್ಕೆ ತಕ್ಕವನಾಗಿದ್ದಿ ಎಂದು ವ್ಯಾಸ ಋಷಿಯು ಭಾಸ್ಕರನಿಗೆ ಹೇಳಿದನು.

ಹೀಗೆ ಪ್ರಶ್ನೆ ಮಾಡಲ್ಪಟ್ಟ ಭಾಸ್ಕರನು ವ್ಯಾಸನನ್ನು ಕುರಿತು ಸ್ವಾಮಿಯೇ, ನಾನು ಎಲ್ಲಿ ವಾಸಿಸುವುದರಿಂದ ಮತ್ತು ಯಾರನ್ನು ಸೇವಿಸುವುದರಿಂದ ನನಗೆ ಶ್ರೇಯಸ್ಸುಂಟಾಗುವುದು ? ಇದನ್ನು ನನಗೆ ಹೇಳಿ ಎಂದು ಕೇಳಿದನು. ಹೀಗೆ ಹೇಳಲ್ಪಟ್ಟ

ವ್ಯಾಸನು ಭಾಸ್ಕರನಿಗೆ ಒಂದು ಕಥೆಯನ್ನು ಹೇಳಲು ಮೊದಲು ಮಾಡಿದನು. ಅಯ್ಯಾ ಬ್ರಾಹ್ಮಣನೇ ! ನಿನಗೆ ಶ್ರೇಯಸ್ಸುಂಟಾಗುವ ಒಂದು ಕಥೆಯನ್ನು ಹೇಳುತ್ತೇನೆ ಕೇಳು. ಕರ್ನಾಟಕ ದೇಶದಲ್ಲಿ ಯಾಯಾವರ ಕುಲದಲ್ಲಿ ಹುಟ್ಟಿದ, (ಯಾಯಾವರರು ಎಂದರೆ ಯಾಯಾವಾರ ಮಾಡಿಕೊಂಡು ದಿನಕ್ಕೊಂದೂರನ್ನು ತಿರುಗುವವರು ಎಂದರ್ಥ) ವೇದ ವೇದಾಂಗಪಾರಂಗತನಾದ, ಹೆಂಡತಿ ಮಕ್ಕಳು ಯಾರೂ ಇಲ್ಲದವನಾದ ಮಾಧವನೆಂಬ ಒಬ್ಬ ಬ್ರಾಹ್ಮಣನು ತೀರ್ಥಯಾತ್ರೆಗೆ ಹೊರಟನು. ಅವನು ಹೋಗುತ್ತಾ ದಾರಿಯಲ್ಲಿ ಕಾಶಿಯೇ ಮೊದಲಾದ ಪುಣ್ಯಕ್ಷೇತ್ರಗಳನ್ನೂ ಗಂಗಾದಿ ನದಿಗಳನ್ನೂ, ಶ್ರೀಶೈಲವೇ ಮೊದಲಾದ ಪರ್ವತಗಳನ್ನೂ, ವೇಂಕಟೇಶಾದಿ ದಿವ್ಯ ಮೂರ್ತಿಗಳನ್ನೂ, ಇನ್ನೂ ಸೇತುವಿಗೂ ಹಿಮವತ್ ಪರ್ವತಕ್ಕೂ ಮಧ್ಯೆ ಅಲ್ಲಲ್ಲಿ ಪ್ರಸಿದ್ಧವಾದ ಪಾಪಾಹರವಾದ ಪುಣ್ಯಕ್ಷೇತ್ರಗಳನ್ನೂ ಸೇವಿಸಿದನು. ಹಾಗೆಯೇ ಹೋಗುತ್ತಾ ಕಾವೇರಿ ದಡದಲ್ಲಿರುವ ರಂಗನಾಥನನ್ನು ಸೇವಿಸಿ ಅಲ್ಲಿಂದ ಉತ್ತರಾಭಿಮುಖವಾಗಿ ಹೊರಟು ಎರಡು ದಿನಗಳ ನಂತರ ಸಾಯಂಕಾಲದ ಹೊತ್ತಿಗೆ ಅಡವಿಯಲ್ಲಿದ್ದ ಒಂದು ಮಂಟಪವನ್ನು ಸೇರಿ ಸಮೀಪದಲ್ಲಿದ್ದ ಶುಚಿಯಾದ ನೀರುಳ್ಳ ಹೊಂಡದಲ್ಲಿ ಸ್ನಾನ ಸಂಧ್ಯಾವಂದನೆ ಮಾಡಿ ರಾತ್ರಿಯನ್ನು ಅದೇ ಮಂಟಪದಲ್ಲಿ ಕಳೆಯಲು ನೆಲದ ಮೇಲೆ ದರ್ಭೆ ಹಾಕಿಕೊಂಡು ಅದರ ಮೇಲೆ ಕುಳಿತು ಸುತ್ತಲೂ ಇರುವ ಪ್ರದೇಶಗಳನ್ನೂ, ಮರಗಳನ್ನೂ, ಬಳ್ಳಿಗಳನ್ನೂ ನೋಡುತ್ತಿದ್ದ ಅ ಬ್ರಾಹ್ಮಣನಿಗೆ ಆ ಹೊಂಡದ ದಡದಲ್ಲಿ ಬೆಂಕಿಯಂತೆ ಪ್ರಕಾಶಿಸುತ್ತಿದ್ದ ಒಂದು ಹುತ್ತವು ಕಾಣಿಸಿಕೊಂಡಿತು. ಅವನ್ನು ನೋಡುತ್ತಿದ್ದ ಹಾಗೆಯೇ ಅವನು ತುಂಬಾ ಬೆರಗಾದನು. ಅವನ ಮನಸ್ಸು ಕೊಂಚಚಕಿತವಾಗಿ ಇದು ಏನಿದ್ದೀತೆಂದು ಅವನು ಆಲೋಚಿಸತೊಡಗಿದನು. ಅನಂತರ ಆಕಾಶದಲ್ಲಿ ವೀಣೆ, ಮೃದಂಗ ಮೊದಲಾದ ವಾದ್ಯಗಳ ಧ್ವನಿಯೂ, ಸ್ತ್ರೀಯರ ಸಂಗೀತವೂ, ಕಾಲು ಕಡಗಗಳ ಧ್ವನಿಯೂ ಅವನಿಗೆ ಕೇಳಬಂದವು. ಆ ಧ್ವನಿಯನ್ನು ಕೇಳುತ್ತಿದ್ದ ಹಾಗೆಯೇ ಆ

ಹುತ್ತದ ಸುತ್ತಲೂ ದೇವಸ್ತ್ರೀಯರು ಕಾಣಿಸಿಕೊಂಡರು. ದಿವ್ಯವಾದ ವಸ್ತ್ರಾಭರಣ ಗಂಧ ಪುಷ್ಪಾದಿಗಳಿಂದ ಅಲಂಕತರಾಗಿ ಯೌವನ ಮಧ್ಯಸ್ಥರಾಗಿದ್ದ ಅವರೆಲ್ಲರೂ ಹೊತ್ತಿಕೊಂಡಂತಿದ್ದ ಆ ಹುತ್ತವನ್ನು ಪರಮಭಕ್ತಿಪೂರ್ವಕವಾಗಿ ದಿವ್ಯವಾದ ಪುಷ್ಪ, ಫಲ, ಭಕ್ಷ್ಯಗಳಿಂದ ಪೂಜಿಸಿದರು. ಅದರ ಸುತ್ತಲೂ ವೀಣಾದಿಗಳ ಇಂಪಾದ ಧ್ವನಿಯೊಡನೆ ಗಾನ ಮಾಡುತ್ತಾ ನರ್ತನ ಮಾಡಿ ಒಂದೇ ನಿಮಿಷಮಾತ್ರದಲ್ಲಿ ಸಮಸ್ತ ಸ್ತ್ರೀಯರೂ ಅಂತರ್ಧಾನವಾದರು.

ಅದೇ ಕ್ಷಣದಲ್ಲಿ ನಾರದನು ಬಂದು ಆ ಹುತ್ತದ ಪೂರ್ವಭಾಗದಲ್ಲಿ ನಿಂತು ವೀಣೆಯನ್ನು ಬಾರಿಸುತ್ತಾ ಗಾನಮಾಡತೊಡಗಿದನು. ಮಾಧವನು ನಾರದರನ ಮುಖ ಕಮಲದಿಂದ ಹೊರಟ ಹರಿನಾಮಾಮೃತವನ್ನು ಪಾನಮಾಡಿ ಪರಮಾನಂದವನ್ನು ಹೊಂದಿ ಇನ್ನು ಗಾನವು ನಿಲ್ಲುತ್ತಾ ಬಂತೆಂಬುದನ್ನು ತಿಳಿದು ಮೆಲ್ಲ ಮೆಲ್ಲಗೆ ನಾರದನಲ್ಲಿಗೆ ಹೋಗಿ ಅವನಿಗೆ ನಮಸ್ಕರಿಸಿ ಕೈಮುಗಿದ ಕೊಂಡು ಆತನ ಮುಂದೆ ನಿಂತನು. ನಾರದನು ತನ್ನ ಮುಂದೆ ನಿಂತ ಮಾಧವನನ್ನು ನೋಡಿ ಮುಗುಳುನಗೆಯಿಂದ ನೀನು ಯಾರು ? ನಿರ್ಜನವಾದ ಕಾಡಿಗೆ ಅರ್ಧರಾತ್ರಿಯಲ್ಲಿ ಏತಕ್ಕೆ ಬಂದೆ ? ನೀನು ನನ್ನನ್ನು ಏನು ಕೇಳಬೇಕೆಂದಿರುವಿ ? ನಾನು ನಾರದನು. ಈ ಹುತ್ತದಲ್ಲಿ ಪ್ರತಿಷ್ಠಿತನಾಗಿರುವ ಶ್ರೀಹರಿಯ ಸೇವೆಗಾಗಿ ಬಂದಿದ್ದೇನೆ ಎಂದು ಹೇಳಿದನು. ಅದಕ್ಕೆ ಮಾಧವನು ಈ ಹುತ್ತವು ಯಾವುದು ? ಇದರಲ್ಲಿ ಯಾವ ದೇವರು ಅಡಗಿದೆ ? ಅದು ಯಾವ ರೂಪವುಳ್ಳದ್ದು ? ಏನು ಫಲವನ್ನು ಕೊಡುವಂತಾದ್ದು ? ಪೂರ್ವದಲ್ಲಿ ಈ ಮೂರ್ತಿಯು ಯಾರಿಂದ ಅರ್ಚಿಸಲ್ಪಟ್ಟಿತು ? ಈ ಹುತ್ತವು ಯಾವಾಗ ಹೋಗುವುದು ? ಸಮಸ್ತ ಭಕ್ತರಿಗೂ ಆ ಮೂರ್ತಿಯ ದರ್ಶನವು ಯಾವಾಗ ? ಇದೆಲ್ಲವನ್ನೂ ದಯಮಾಡಿ ನನಗೆ ಹೇಳು, ಕೈ ಮುಗಿದು ಬೇಡುವೆನು. ನಿನ್ನ ಮುಖದಿಂದ ಈ ರಹಸ್ಯವನ್ನು ತಿಳಿಯಲು ನನಗೆ ತುಂಬಾ ಕುತೂಹಲವು ಎಂದು ನಾರದನನ್ನು ಪ್ರಶ್ನೆ ಮಾಡಿದನು.

ಹೀಗೆ ಪ್ರಶ್ನೆ ಮಾಡಲ್ಪಟ್ಟ ಆ ದೇವರ್ಷಿಯಾದ ನಾರದನು ಬ್ರಾಹ್ಮಣನನ್ನು ಕುರಿತು ಅಯ್ಯಾ ! ಬ್ರಾಹ್ಮಣ ! ನಿನಗೆ ಶ್ರೇಯಸ್ಸು ಸಮೀಪಿಸಿದೆ. ನೀನು ಧನ್ಯನು ಕೇಳು ಎಂದು ಮುಗುಳುನಗೆಯಿಂದ ವಿಷಯವನ್ನೆಲ್ಲಾ ಹೇಳತೊಡಗಿದನು. ಅಯ್ಯಾ ಬ್ರಾಹ್ಮಣ ಶ್ರೇಷ್ಠನೇ ! ಈ ಹುತ್ತವು ರಾತ್ರಿಯಲ್ಲಿ ಅಗ್ನಿಗೆ ಸಮಾನವಾಗಿ ಕಾಣುತ್ತದೆ. ಇದಕ್ಕೆ ಕಾರಣವು ಅದರಲ್ಲಿ ಶ್ರೀಹರಿಯು ನೆಲಸಿರುವುದೇ ಹೊರತು ಮತ್ತೆ ಬೇರೆ ಇಲ್ಲ. ಈ ಹುತ್ತದ ಒಳಗಡೆಯಲ್ಲಿ ಶುಭಕರವೂ, ಮನೋಹರವೂ ಕಾಂತಿಯುತವೂ ಅದ ಶ್ರೀ ಶ್ರೀನಿವಾಸ ವಿಗ್ರಹವಿದೆ. ಈ ವಿಗ್ರಹದ ಪ್ರಭಾವಳಿಯಲ್ಲಿ ಎರಡು ಪಕ್ಕದಲ್ಲೂ ಅಮ್ಮನವರ ವಿಗ್ರಹಗಳಿವೆ ಮತ್ತು ಮಂಗಳಮೂರ್ತಿಯಾದ ಈ ವಿಗ್ರಹವು ಪೀಠದಲ್ಲಿರುವ ಗರುಡನಿಂದ ವಹಿಸಲ್ಪಟ್ಟಿದೆ. ಈ ವಿಗ್ರಹದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ದಿವ್ಯವಾದ ಕಳೆಯೂ ನೆಲಸಿದೆ. ಈ ವಿಗ್ರಹವು ಪೂರ್ವದಲ್ಲಿ ಹಂಸಧ್ವಜನ ಮಗನಾದ ಸುಧನ್ವನೆಂಬುವನಿಂದ ಪ್ರತಿದಿನವೂ ವಿಧವಿಧವಾದ ಉತ್ಸವಗಳಿಂದ ಪೂಜಿಸಲ್ಪಟ್ಟಿದ್ದಾಗಿತ್ತು. ಈ ಪ್ರದೇಶದಲ್ಲಿ ಚಂಪಕವೆಂಬ ಪ್ರಸಿದ್ಧವಾದ ಸುಧನ್ವದ ಪಟ್ಟಣವಿತ್ತು. ಅದು ಕ್ರಮೇಣ ನಾಶವಾಗಿ ಆ ಪ್ರದೇಶವು ಕಾಡಾಯಿತು. ಅ ವಿಗ್ರಹದ ಮೇಲೆ ದೊಡ್ಡ ಹುತ್ತವು ಕ್ರಿಮಿಗಳಿಂದ ನಿರ್ಮಿಸಲ್ಪಟ್ಟು ವಿಗ್ರಹವು ಭಿನ್ನವಾಗದೆ ಆಲಯದಲ್ಲಿರುವಂತೆ ಕಾಪಾಡಲ್ಪಟ್ಟಿದೆ. ಒಂದು ಹಸುವು ನಿತ್ಯವೂ ಬಂದು ಕ್ಷೀರಧಾರೆಯಿಂದ ಈ ಹುತ್ತವನ್ನು ನೆನಸುತ್ತಿರುವುದು. ಈ ವಿಚಾರವನ್ನು ಯಾವನೊಬ್ಬನೂ ಅರಿಯನು. ಹೀಗೆ ಹಸುವು ಕ್ಷೀರಾಭಿಷೇಕ ಮಾಡುತ್ತಿರುವುದನ್ನು ಜನರು ಕಂಡು ಆಶ್ಚರ್ಯಪಟ್ಟು ಗುಂಪು ಕೂಡಿ ಈ ಹುತ್ತದೊಳಗೆ ಏನಿದೆಯೋ ನೋಡಬೇಕೆಂದು ಈ ಹುತ್ತವನ್ನು ಅಗೆಯಲು ಪ್ರಯತ್ನಿಸುವವರೆವಿಗೂ ನೀನು ನಿಯತವ್ರತದಿಂದ ಇಲ್ಲೇ ಇದ್ದುಕೊಂಡು, ಪರಿಶುದ್ಧವಾದ ನೀರುಳ್ಳ ಈ ಹೊಂಡದಲ್ಲಿ ದಿನವೂ ಸ್ನಾನಮಾಡು. ಭಕ್ತರ ಗುಂಪು ಸೇರುವವರಿಗೂ ಈ ಹುತ್ತವನ್ನು ಪೂಜಿಸುತ್ತಿರು, ಭಕ್ತರು ಸೇರಿದನಂತರ ಮೆಲ್ಲಗೆ ಈ ಹುತ್ತವನ್ನು

ಅಗೆದು ದೇವತಾ ವಿಗ್ರಹಕ್ಕೆ ಮಂದಿರವನ್ನು ಮಾಡಿ ಉತ್ಸವಾದಿಗಳನ್ನು ನಡೆಸು, ಈ ಹೊಂಡವನ್ನು ಅಗೆದು ವಿಸ್ತಾರ ಪಡಿಸು. ಇಂದ್ರಿಯ ನಿಗ್ರಹವುಳ್ಳವನೂ, ಚಂಚಲಚಿತ್ತವಿಲ್ಲದವನೂ, ತಾಳ್ಮೆಯುಳ್ಳವನೂ, ಆಗಿ ಕಂದಮೂಲ ಫಲಗಳನ್ನು ಭಕ್ಷಿಸುತ್ತಾ ಇದ್ದು, ನಿತ್ಯೋತ್ಸವಾದಿಗಳಿಂದ ಈ ಮೂರ್ತಿಯ ಸೇವೆ ಮಾಡುತ್ತಾ ಸಂತೋಷಚಿತ್ತನಾಗಿರು. ನೀನು ಶ್ರೀಹರಿಯ ಪಾದಾರವಿಂದವನ್ನು ಪಡೆಯುವಿ. ಅದರೆ ಅರ್ಧ ರಾತ್ರಿಯಲ್ಲಿ ದೇವತಾಸ್ತ್ರೀಯರು ಇಲ್ಲಿಗೆ ಬರುವವರಾದುದರಿಂದ ನೀನು ಇಲ್ಲಿ ನಿಲ್ಲಬೇಡ. ಈ ಪ್ರದೇಶವು ಯಕ್ಷ ಗಂಧರ್ವ ದೇವರ್ಷಿಗಳಿಂದಲೂ ಸುರಾಸುರರಿಂದಲೂ, ದೊಡ್ಡ ದೊಡ್ಡ ಹಾವುಗಳಿಂದಲೂ ಕೂಡಿ, ಸುಧನ್ವನೇ ಮೊದಲಾದ ರಾಜರುಗಳಿಂದ ಅರ್ಚಿಸಲ್ಪಟ್ಟಿದೆ. ಈ ಪ್ರದೇಶದಲ್ಲಿ ಜಿಂಕೆಗಳೂ, ಮುತ್ತುಗದ ವನವೂ, ಅಲ್ಲಲ್ಲಿ ತುಳಸೀ ಕಾನನಗಳೂ ಇವೆ. ಅದುದರಿಂದ ಇದು ಪುಣ್ಯ ಸ್ಥಳವು. ಇಲ್ಲಿ ಶ್ರೀಹರಿ ಸಾನ್ನಿಧ್ಯವುಂಟು. ಇಲ್ಲಿ ಲಕ್ಷ್ಮೀಪತಿಯಾದ ಶ್ರೀನಿವಾಸಮೂರ್ತಿಯನ್ನು ನಾಲ್ಕು ವರ್ಣದವರೂ ಸೇವಿಸಿ ಪಾಪರಹಿತರಾಗುವರು. ಈ ಪ್ರದೇಶಕ್ಕೆ ಸಮೀಪದಲ್ಲಿ ಕೇಶವಮೂರ್ತಿ, ಈಶ್ವರ ಮತ್ತು ದೊಡ್ಡ ಆಕಾರದ ಅಂಜನೇಯ ವಿಗ್ರಹಗಳೂ, ಕರೆಯೂ ಇವೆ ಎಂದು ಹೇಳುತ್ತಾ ಆ ದೇವರ್ಷಿಯಾದ ನಾರದನು ಅರ್ಚನಾವಿಧಿಯನ್ನು ಮಾಧವನಿಗೆ ಉಪದೇಶ ಮಾಡಿ ಅಂತರ್ಧಾನವಾದನು.

ಈ ಕೂಡಲೇ ಆಕಾಶದಿಂದ ಪುಷ್ಪವೃಷ್ಟಿಯು ಆಯಿತು. ಇಂತಹ ಆಶ್ಚರ್ಯ ವಿಷಯವನ್ನು ನಾರದನಿಂದ ಕೇಳಿ ಆಕಾಶದಿಂದ ಬಿದ್ದ ಪುಷ್ಪವೃಷ್ಟಿಯನ್ನು ನೋಡಿ ಬ್ರಾಹ್ಮಣನು ಬೆರಗಾದನು. ಅಷ್ಟರಲ್ಲೇ ಬೆಳಗಾಯಿತು. ಅನಂತರ ಜಾಗ್ರತೆಯಾಗಿ ಮೇಲಕ್ಕೆದ್ದು ಹಿಗ್ಗಿದ ಮನಸ್ಸುಳ್ಳವನಾಗಿ ಹೊಂಡದಲ್ಲಿದ್ದ ಶುದ್ಧವಾದ ನೀರಿನಲ್ಲಿ ಸ್ನಾನ ಮಾಡಿ ಪೂಜಾದ್ರವ್ಯಗಳನ್ನು ಒದಗಿಸಿಕೊಳ್ಳಲು ವನದಲ್ಲೆಲ್ಲಾ ಸಂಚರಿಸಿದನು. ಆ ವನವು ಹೂವುಗಳಿಂದಲೂ ಹಣ್ಣುಗಳಿಂದಲೂ, ನಾನಾಬಗೆಯ ಮರಗಳಿಂದಲೂ,

ಬಳ್ಳಿಗಳಿಂದಲೂ, ಪೊದೆಗಳಿಂದಲೂ ಶೋಭಿಸುತ್ತಿತ್ತು. ಬಗೆಬಗೆಯಾದ ಹೂವುಗಳನ್ನೂ, ಹಣ್ಣುಗಳನ್ನೂ ಆ ಬ್ರಾಹ್ಮಣನು ತಂದು ಸಂತೋಷದಿಂದ ಯಥಾವಿಧಿಯಾಗಿ ಆ ಹುತ್ತವನ್ನು ಪೂಜಿಸಿದನು. ಆಮೇಲೆ ಅದೇ ಮಂಟಪದಲ್ಲಿ ಆ ಬ್ರಾಹ್ಮಣನು ನಡೆದ ಸಂಗತಿಗಳನ್ನೆಲ್ಲಾ ನೆನೆಸಿಕೊಳ್ಳುತ್ತಾ ಕುಳಿತುಕೊಂಡನು. ಬಳಿಕ ಗೋಪಾಲಕರಾದ ಹುಡುಗರಿಂದ ಹಿಂಬಾಲಿಸಲ್ಪಟ್ಟು ಎಳೆಗರುಗಳಿಂದ ಕೂಡಿದ, ಒಳ್ಳೆಯ ಲಕ್ಷಣಗಳುಳ್ಳ ಗೋವುಗಳು ಹಿಂಡುಹಿಂಡಾಗಿ ಅ ವನಕ್ಕೆ ಬಂದು ಅಲ್ಲಲ್ಲಿ ಸಂಚರಿಸಿ ಮೇಯುತ್ತಾ ಬಂದವು. ಆ ಹಸುಗಳಲ್ಲಿ ಗಡಿಗೆಯಂತೆ ಕೆಚ್ಚಲುಳ್ಳ ಒಂದು ಹಸುವು ಆ ಹುತ್ತದ ಹತ್ತಿರಕ್ಕೆ ಬಂದು ಕೆಚ್ಚಲಿನಿಂದ ಆ ಹುತ್ತದ ಮೇಲೆ ಹಾಲು ಸುರಿಸುತ್ತಾ ಆ ಹುತ್ತವನ್ನು ಮತ್ತೆ ಮತ್ತೆ ಮೂಸಿನೋಡುತ್ತಿತ್ತು. ಇಷ್ಟರಲ್ಲಿ ಒಬ್ಬಾನೊಬ್ಬ ಗೋಪಾಲಕನು ಆ ಹಸುವನ್ನು ಹುಡುಕುತ್ತಾ ಆ ಸ್ಥಳಕ್ಕೆ ಬಂದನು. ಹುತ್ತದ ಮೇಲೆ ಹಾಲು ಸುರಿಸುತ್ತಿರುವ ಆ ಹಸುವನ್ನು ಕಂಡನು. ಆಗ ದೂರದಲ್ಲಿದ್ದ ಬೇರೆ ಗೋಪಾಲಕರನ್ನು ಕೂಗಿದನು. ಅವರೆಲ್ಲರೂ ಬಂದು ಹುತ್ತವನ್ನೂ ಮತ್ತೆ ಮತ್ತೆ ಮೂಸಿನೋಡುತ್ತಿರುವ ಹಸುವನ್ನೂ ಹುತ್ತಕ್ಕೆ ಪೂಜೆ ಮಾಡಿರುವ ಒಳ್ಳೆಯ ಹೂವುಗಳನ್ನೂ, ನಿವೇದಿಸಿದ ಹಣ್ಣುಗಳನ್ನೂ ಸಮೀಪದಲ್ಲಿರುವ ಬ್ರಾಹ್ಮಣನನ್ನೂ ಕಂಡು ಆಶ್ಚರ್ಯಪಟ್ಟರು. ತರುವಾಯ ಆ ಹಸುವು ಆ ಹುತ್ತವನ್ನು ಸಂತೋಷದಿಂದ ಹಿಂತಿರುಗಿ ಹಿಂತಿರುಗಿ ನೋಡುತ್ತಾ ಮೆಲ್ಲಮೆಲ್ಲನೆ ಹೊರಟು ಹೋಯಿತು. ಬ್ರಾಹ್ಮಣನು ಆ ಗೋಪಾಲಕರಿಗೆ ಹೂವುಗಳನ್ನೂ ಹಣ್ಣುಗಳನ್ನೂ ಕೊಟ್ಟನು. ಅವರು ಅವುಗಳನ್ನು ಬೊಗಸೆಯೊಡ್ಡಿ ಭಕ್ತಿಯಿಂದ ತೆಗೆದುಕೊಂಡರು. ಅದು ಮೊದಲ್ಗೊಂಡು ಗೋಪಾಲಕರು ಆ ಬ್ರಾಹ್ಮಣನು ಮಾಡುತ್ತಿದ್ದ ಪೂಜೆಯನ್ನೂ, ಹುತ್ತದ ಮೇಲೆ ಹಸುವು ಹಾಲು ಸುರಿಸುತ್ತಿರುವುದನ್ನೂ ನೋಡಲು ನಿತ್ಯವೂ ಬರುತ್ತಿದ್ದರು ಮತ್ತು ಹೂವು, ಹಣ್ಣು, ತುಪ್ಪ, ಹಾಲು, ಮೊಸರು, ಜೇನು ಇವುಗಳನ್ನು ಸಂತೋಷದಿಂದ ತಂದು ಒಪ್ಪಿಸುತ್ತಿದ್ದರು. ಅನಂತರ ಕೆಲವು

ದಿನಗಳಲ್ಲಿ ಸುತ್ತಮುತ್ತಲಿದ್ದ ಹಳ್ಳಿಗಳಿಂದ ವೃದ್ಧರೂ, ತರುಣರೂ, ಹೆಂಗಸರೂ, ಹುಡುಗರೂ ಗುಂಪು ಗುಂಪಾಗಿ ಬರುತ್ತಿದ್ದರು.

ಅಲ್ಲಿಗೆ ಬಂದ ಮಹಾ ಭಕ್ತರುಗಳ ಪ್ರಾರ್ಥನೆಯ ಮೇಲೆ ಮಾಧವನು ಹುತ್ತವು ಕರಗಿಹೋಗುವಂತೆ ಹುತ್ತದ ಮೇಲೆ ಒಂದೇ ಧಾರೆಯಾಗಿ ನೀರು ಸುರಿದನು. ಹುತ್ತದ ಮಣ್ಣೆಲ್ಲಾ ಕರಗಿ ಕೊಚ್ಚಿ ಹೋಗಲು ಒಳಗಿದ್ದ ಶ್ರೀನಿವಾಸ ವಿಗ್ರಹವು ಕಂಡುಬಂದಿತು. ತಕ್ಷಣವೇ ದೇವದುಂದುಭಿಗಳು ಮೊಳಗಿದವು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಆ ಮಹದಾಶ್ಚರ್ಯವನ್ನು ಕಂಡು ಜನರು ಕೊಂಚಹೊತ್ತು ನಾವು ಧನ್ಯರು ಎಂದು ಕೂಗಿಕೊಳ್ಳುತ್ತಾ ಬಟ್ಟೆಗಳನ್ನು ಮೇಲಕ್ಕೆಸೆದು ಕುಣಿದಾಡಿದರು. ನಾರದನಿಂದ ಕೇಳಿದಂತೆ ಇದ್ದ ಆ ದಿವ್ಯಮಂಗಳ ವಿಗ್ರಹವನ್ನು ಮಾಧವನೂ ಮತ್ತು ಆ ಜನರೂ ನೋಡಿ ಅಪಾರವಾದ ಸಂತೋಷವನ್ನು ಹೊಂದಿದರು. ಅದರೆ ಮಾಧವನು ಆ ಹುತ್ತವನ್ನು ತೆಗೆಯಲು ಮೊದಲು ಮಾಡಿದಂದಿನಿಂದ ಹಾಲು ಸುರಿಸುತ್ತಿದ್ದ ಆ ಹಸುವು ಹಿಂತಿರುಗಿ ಬರದೇ ಅಲ್ಲೇ ನಿಂತುಬಿಟ್ಟಿತು. ಆಮೇಲೆ ಎಲ್ಲರೂ ಒಟ್ಟುಗೂಡಿ ಬೇಗನೆ ಅಲ್ಲಿ ಒಂದು ಮಂಟಪವನ್ನು ಕಟ್ಟಿ ಅದಕ್ಕೆ ಬಾಗಿಲು ಸಹ ಮಾಡಿದರು. ಅನಂತರ ನಾರದನ ಮಾತಿನಂತೆ ಆ ಹೊಂಡವನ್ನು ವಿಸ್ತಾರ ಮಾಡಬೇಕೆಂದು. ಮಾಧವನು ಅಗೆಯುತ್ತಿರಲು ಲೋಹನಿರ್ಮಿತವಾದ ಶ್ರೀನಿವಾಸ ವಿಗ್ರಹವು ಅಮ್ಮನವರ ಎರಡು ವಿಗ್ರಹಗಳೊಂದಿಗೆ ಆತನಿಗೆ ದೊರೆಯಿತು. ಅವುಗಳನ್ನೇ ಉತ್ಸವ ವಿಗ್ರಹಗಳನ್ನಾಗಿ ತಿಳಿದು ತಾನು ಕಟ್ಟಿಸಿದ ಮಂಟಪದಲ್ಲಿ ಅವುಗಳನ್ನು ಪ್ರತಿಷ್ಠಿಸಿ ವಿವಿಧವಾದ ಅರ್ಚನೆಗಳಿಂದಲೂ, ಸ್ತೋತ್ರಗಳಿಂದಲೂ, ಉಪಚಾರಗಳಿಂದಲೂ, ಮಹೋತ್ಸವಗಳಿಂದಲೂ ಪ್ರತಿದಿವಸವೂ ಶ್ರೇಷ್ಠವಾದ ಭಕ್ತಿಯಿಂದ ಶ್ರೀನಿವಾಸನನ್ನು ಅರ್ಚಿಸುತ್ತಿದ್ದನು. ತದನಂತರ ಸುತ್ತಮುತ್ತ ಪ್ರದೇಶಗಳಿಂದ ಭಕ್ತರು ಬರಹತ್ತಿದರು. ಶ್ರೀನಿವಾಸನನ್ನು ಸೇವಿಸಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಿದ್ದರು. ಪ್ರತಿ ವೈಶಾಖಮಾಸದಲ್ಲಿ ದಿವ್ಯವಾದ ರಥೋತ್ಸವವನ್ನೂ ಮತ್ತು ಇತರ ಮಾಸಗಳಲ್ಲಿ

ಮಹೋತ್ಸವಗಳನ್ನೂ ಮಾಡುತ್ತಿದ್ದರು. ಈ ವೃತ್ತಾಂತವು ಸುತ್ತಲೂ ಹರಡಿತು. ಆ ಪ್ರದೇಶವು ಸಂಪಿಗೆ ಗ್ರಾಮವೆಂದು ಪ್ರಸಿದ್ಧವಾಯಿತು. ಏಕೆಂದರೆ ಅಲ್ಲಿ ಪೂರ್ವದಲ್ಲಿ ಚಂಪಕನಗರವಿತ್ತು. ಒಂದಾನೊಂದು ಕಾಲದಲ್ಲಿ ಭಾರ್ಗವನೆಂಬ ಬ್ರಾಹ್ಮಣನು ಕಾಶಿಗೆ ಹೋಗಿ ಪಾರ್ವತಿಯನ್ನು ಸೇವಿಸಿ ಅಲ್ಲಿಂದ ಒಂದು ಬಿಲ್ವಪತ್ರೆ ಸಸಿಯನ್ನು ತೆಗೆದುಕೊಂಡು ಕಾಲುನಡಿಗೆಯಲ್ಲಿ ಹಿಂತಿರುಗಿ ಬರುತ್ತಾ ದಾರಿಯಲ್ಲಿ ಸಂಪಿಗೆ ಗ್ರಾಮವನ್ನು ಸೇರಿದನು. ಆಗ ಅಲ್ಲಿ ನಡೆಯುತ್ತಿದ್ದ ಶ್ರೀನಿವಾಸರ ರಥೋತ್ಸವನ್ನು ಹಗಲೂ ರಾತ್ರಿ ನೋಡಿದನು. ದೇವಸ್ಥಾನದ ಎಡಗಡೆಯಲ್ಲಿ ಪ್ರಾಕಾರದೊಳಗೆ ಯಾರಿಗೂ ಕಾಣದ ಬಳಿಯಲ್ಲಿ ಆ ಬಿಲ್ವಪತ್ರೆ ಸಸಿಯನ್ನಿಟ್ಟನು. ತೀರ್ಥಸ್ನಾನವಾದ ನಂತರ ಭಾರ್ಗವನು ಊರಿಗೆ ಹೊರಟವನಾಗಿ ಆ ಬಿಲ್ವಪತ್ರೆ ಸಸಿಯನ್ನು ಕಿತ್ತು ನೋಡಿ ಬರದೇ ಇರಲು ಚೆನ್ನಾಗಿ ಬೇರು ಬಿಟ್ಟಿರಬಹುದು ಎಂದುಕೊಂಡು ಆ ಸಸಿಯನ್ನು ಅಲ್ಲಿಯೇ ಬಿಟ್ಟು ಶ್ರೀಹರಿಯನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ ಹೊರಟು ಹೋದನು. ಆ ಸಸಿಯು ಅದೇ ಸ್ಥಳದಲ್ಲಿ ಸ್ವಲ್ಪ ದಿವಸದಲ್ಲಿಯೇ ಮರವಾಯಿತು.ಆ ಬಿಲ್ವವೃಕ್ಷದಲ್ಲಿ ಶ್ರೀಲಕ್ಷ್ಮಿಯು ಅನಪಾಯಿನಿಯಾಗಿ ವಾಸ ಮಾಡುತ್ತಲಿದ್ದಾಳೆ.

ದೇವಸ್ಥಾನಕ್ಕೆ ಪೂರ್ವದಿಕ್ಕಿನಲ್ಲಿ ಕೊಂಚ ದೂರದಲ್ಲಿ ಬೋರೆಯ ಮೇಲೆ ಎರಡು ಬೇವಿನ ಮರಗಳಿವೆ. ಅವುಗಳ ಎಲೆಗಳು ಸಿಹಿಯಾಗಿರುವುದು. ಆ ಮರದ ಬಳಿಯಲ್ಲಿ ಸುಧನ್ವನು ತಂದೆಯಿಂದ ಕಾದ ಎಣ್ಣೆಯಲ್ಲಿ ಹಾಕಲ್ಪಟ್ಟನು. ಆ ಮರದ ಬಳಿಯಲ್ಲಿ ಮುಂಗಾರಿನಲ್ಲಿ ಬಿದ್ದ ನೀರು ಎಣ್ಣೆಯಂತೆ ಕಾಣುವುದು. ಅದರೆ ಬಹು ಕಾಲಕ್ಕೆ ಬಿಲ್ವ ವೃಕ್ಷವೂ ಬೇವಿನ ಮರಗಳ ಮಾಧುರ್ಯವೂ, ಬೇವಿನ ಮರಗಳೂ ನಾಶವಾಗುವುವು. ಪೂರ್ವದಲ್ಲಿ ಸುಧನ್ವನ ಕಾಲದಲ್ಲಿ ಶ್ರೀನಿವಾಸ ಮಹೋತ್ಸವವು ಹೇಗೆ ನಡೆಯುತ್ತಿತ್ತೋ ಹಾಗೆಯೇ ಮುಂದೆ ಒಂದಾನೊಂದು ಕಾಲಕ್ಕೆ ಉತ್ಸವವು ವಿಜೃಂಭಣೆಯಿಂದ ಆಗುವುದು. ಯಾವನು ಈ ಶ್ರೀನಿವಾಸನ ಕ್ಷೇತ್ರ ಮಹಿಮೆಯನ್ನು ಕೇಳುತ್ತಾನೋ ಅಥವಾ ಕೇಳಿಸುತ್ತಾನೋ ಅವನು ಧನ್ಯನು. ಅವನಿಗೆ ಶ್ರೀನಿವಾಸನು ಸಂತುಷ್ಟನಾಗಿ ಅಪೇಕ್ಷಿಸಿದ್ದನ್ನು ಕೊಡುವನು. ಶ್ರೀನಿವಾಸನ

ಸೇವೆಯಿಂದ ಧನಾರ್ಥಿಯು ಧನವನ್ನೂ, ವಿದ್ಯಾರ್ಥಿಯು ವಿದ್ಯೆಯನ್ನೂ, ಆಯುಸ್ಸನ್ನು ಬಯಸುವವನು ಆಯುಸ್ಸನ್ನೂ, ಆರೋಗ್ಯವನ್ನು ಬಯಸುವವನು ಆರೋಗ್ಯವನ್ನೂ, ಮುಕ್ತಿಯನ್ನು ಬಯಸುವವನು ಮುಕ್ತಿಯನ್ನೂ ಪಡೆಯುವನು. ಬಹಳ ಹೇಳಿ ಫಲವೇನು ? ಸಮಸ್ತ ಅಪೇಕ್ಷೆಗಳನ್ನೂ ಹೊಂದುವನು. ಅಲ್ಲದೆ ಸುಲಭವಾಗಿ ಸಿಕ್ಕದ ಮುಕ್ತಿಯನ್ನು ಪಡೆಯುವನು. ಇದು ಸತ್ಯ. ಆದುದರಿಂದ ಭಾಸ್ಕರನೇ ! ಆ ಶ್ರೀನಿವಾಸ ಕ್ಷೇತ್ರಕ್ಕೆ ಇಲ್ಲಿಂದ ಹೋಗು. ಅಲ್ಲಿ ನಿರಾಳವಾದ ಮನಸ್ಸುಳ್ಳವನಾಗಿ ಶ್ರೀನಿವಾಸನ ಕೈಂಕರ್ಯವನ್ನು ಮಾಡುತ್ತಾ ಶಿಷ್ಯರುಗಳಿಂದೊಡಗೂಡಿ ಯಾವಜ್ಜೀವವೂ ವಾಸಮಾಡು. ದೇಹಾವಸಾನ ಸಮಯದಲ್ಲಿ ನಾನು ಹೇಳಿರುವುದೆಲ್ಲವನ್ನೂ ಸ್ಮರಿಸಿಕೊಂಡು ಒಬ್ಬ ಶಿಷ್ಯನಿಗೆ ಹೇಳಿ ನಂತರ ಪರಮಪದವನ್ನು ಹೊಂದು. ಆ ಶಿಷ್ಯನು ನಿನ್ನ ಅನುಗ್ರಹದ ದೆಸೆಯಿಂದ ಶ್ರೀನಿವಾಸನ ಕ್ಷೇತ್ರಮಹಾತ್ಮೆಯನ್ನು ನೀನು ಹೇಳಿದಂತೆ ಕೊಂಚವೂ ಲೋಪಮಾಡದೆ ಗ್ರಂಥರೂಪದಲ್ಲಿ ಬರೆಯುವನು.

ಈ ಲೋಕದಲ್ಲಿ ಆ ಕ್ಷೇತ್ರಮಹಾತ್ಮೆಯು ಸೂರ್ಯಚಂದ್ರರಿರುವವರೆವಿಗೂ ಶ್ರೀನಿವಾಸಾನುಗ್ರಹದಿಂದ ಸ್ಥಿರವಾಗಿಯೂ, ಪ್ರಸಿದ್ಧವಾಗಿಯೂ ಇರಲಿ, ನಿನಗೆ ಶುಭವಾಗಲಿ, ನಾಳೆ ಬೆಳಗ್ಗೆ ಆ ಕ್ಷೇತ್ರಕ್ಕೆ ಜಾಗ್ರತೆ ಹೋಗು ಎಂದು ಹೇಳಿ ವ್ಯಾಸನು ಅಂತರ್ಧಾನವಾದನು. ಆ ಬ್ರಾಹ್ಮಣನು ಎಚ್ಚೆತ್ತು, ಆಹಾ ! ಎಂತಹ ಸ್ವಪ್ನ ? ಇಂತಹ ಸ್ಥಳವೆಲ್ಲದ್ದೀತು ? ಎಂದು ಹುಡುಕುತ್ತಾ ಮತ್ತು ಕೇಳುತ್ತಾ ಅ ಹಿಮವತ್ ಪರ್ವತದ ತಪ್ಪಲಿನಿಂದ ದಕ್ಷಿಣಾಭಿಮುಖವಾಗಿ ಹೊರಟು ಬರುತ್ತಾ ಕೆಲವು ದಿನಗಳಲ್ಲಿ ಒಬ್ಬ ಎತ್ತರವಾದ ವೃದ್ಧ ಬ್ರಾಹ್ಮಣನನ್ನು ಕಂಡನು. ಆತನು ಸ್ವಪ್ನದಲ್ಲಿ ಕಂಡವನಂತೆಯೂ, ಕೃಷ್ಣಾಜಿನವನ್ನು ಧರಿಸಿದವನಾಗಿಯೂ ಇದ್ದನು. ಇಂತಹ ವೃದ್ಧನ ಪಾದಗಳಿಗೆ ಭಾಸ್ಕರನು ನಮಸ್ಕರಿಸಿದನು. ಆ ವೃದ್ಧನು ಭಾಸ್ಕರನನ್ನು ಎಬ್ಬಿಸಿ, ಕೈ ಮುಗಿದು ನಿಂತುಕೊಂಡಿದ್ದ ಭಾಸ್ಕರನನ್ನು ಕುರಿತು ಅಯ್ಯಾ ! ಸ್ವಪ್ನದಲ್ಲಿ ವ್ಯಾಸರಿಂದ ನೀನು ಕೇಳಿ ತಿಳಿದುಕೊಂಡ ಕ್ಷೇತ್ರವು ಅಗೋ ನೋಡು ಅಲ್ಲಿ ಕಾಣುತ್ತಿದೆ.

ಅಲ್ಲಿಗೆ ಹೋಗು ಸುಖಿಯಾಗು, ಅಲ್ಲಿಯೇ ನಿನಗೊಬ್ಬ ಶಿಷ್ಯನು ನಾಳೆ ಬೆಳಗ್ಗೆ ದೊರಕುವನು ಎಂದು ಹೇಳಿ ಮಾಯವಾದನು. ಇದರಿಂದ ಬೆರಗಾದ ಭಾಸ್ಕರನು ಅಲ್ಲಿಂದ ಹೊರಟು ಸಂಪಿಗೆ ಗ್ರಾಮವನ್ನು ತಲುಪಿ ಶ್ರೀನಿವಾಸನ ದರ್ಶನವನ್ನು ಮಾಡಿ, ಆ ದಿನವನ್ನು ಅಲ್ಲಿಯೇ ಕಳೆದು ಶ್ರೀನಿವಾಸನ ದೇವಾಲಯದಲ್ಲಿ ಶಿಷ್ಯನನ್ನು ನಿರೀಕ್ಷಿಸುತ್ತಿದ್ದನು. ಕೊಂಚ ಕಾಲದಲ್ಲಿಯೇ ಆ ಶಿಷ್ಯನು ಅಲ್ಲಿಗೆ ಬಂದು ಭಾಸ್ಕರನ ಪಾದಸೇವೆ ಮಾಡುತ್ತಾ ಆತನಿಂದ ಸಮಸ್ತ ವಿಷಯಗಳನ್ನೂ ತಿಳಿದುಕೊಂಡನು. ಹೀಗಿರುತ್ತಿರುವಾಗ ಸ್ವಲ್ಪ ಕಾಲದ ನಂತರ ಭಾಸ್ಕರನು ಶಿಷ್ಯನನ್ನು ಕುರಿತು "ಈ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀನಿವಾಸನ ಚರಿತ್ರೆಯನ್ನು ಗ್ರಂಥರೂಪದಲ್ಲಿ ಬರೆ" ಎಂದು ಆಜ್ಞಾಪಿಸಿ ಶ್ರೀನಿವಾಸ ಚರಿತ್ರೆಯನ್ನು ಉಪದೇಶಿಸಿ ಆ ಶಿಷ್ಯನನ್ನು ಅಗಲಿ ಸ್ನಾನ ಮಾಡಿ, ಯೋಗಮಾರ್ಗದಿಂದ ದುರ್ಲಭವಾದ ಪರಮಪದವನ್ನು ಹೊಂದಿದನು. ಅನಂತರ ಶಿಷ್ಯನು ಭಾಸ್ಕರನ ದೇಹಸಂಸ್ಕಾರ ಮಾಡಿ ಸಾವಿರಾರು ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಪಡಿಸಿದನು. ಪರಮಪದವನ್ನು ಹೊಂದಿದ ಪರಿಶುದ್ಧವಾದ ಭಾಸ್ಕರನ ಅಪ್ಪಣೆಯಂತೆ ಅನೇಕ ಅರ್ಥವುಳ್ಳ, ಪಾಪನಾಶಕವಾದ, ಚಿತ್ರಾಕ್ಷರಗಳುಳ್ಳ, ಮನೋಹರವಾದ ಸಂಪಿಗೆ ಸ್ಥಳ ಮಹಾತ್ಮೆಯು ಭಾಸ್ಕರನ ಶಿಷ್ಯನಿಂದ ರಚಿಸಲ್ಪಟ್ಟಿತು.

ಅಪ್ಪಾಕ್ಷರಗಳಲ್ಲಿ ಅಡಗಿರುವ ಅರ್ಥವನ್ನು ಭಾಸ್ಕರನ ಶಿಷ್ಯನಿಂದ ಸ್ಫುಟವಾಗಿ ತಿಳಿಯಲ್ಪಟ್ಟ ನನಗೆ ಶ್ರೀಹರಿ ಚರಣದ್ವಯವೇ ಗತಿ.

ಸಂಪಿಗೆ ಗ್ರಾಮದಲ್ಲಿ ನೆಲಸಿರುವ ವೆಂಕಟೇಶನೇ, ನಾರದಾದಿ ಋಷಿಗಳಿಂದ ನಮಸ್ಕರಿಸಲ್ಪಟ್ಟ ಪಾದಪದ್ಮಗಳುಳ್ಳವನೇ, ಲಕ್ಷ್ಮಿಗೆ ಆಶ್ರಯನೇ, ಗರುಡನ ಗುರುತುಳ್ಳ ಪಾದಪೀಠವುಳ್ಳವನೇ, ಶ್ರೀದೇವಿ ಭೂದೇವಿಯರಿಂದ ಸಮೇತನಾದವನೇ, ದೇವತೆಗಳಿಗೆ ಒಡೆಯನೇ, ನಿನಗೆ ನಮಸ್ಕಾರವು.

**** ಶ್ರೀ ಕೃಷ್ಣಾರ್ಪಣಮಸ್ತು ****